ಇರುವಂತೆ, ಕರ್ನಾಟಕದ ಸಾಮಾಜಿಕ ರಾಜಕೀಯ ಸಂಚಲನೆಗಳ ಮುಂಚೂಣಿಯಲ್ಲಿ ಕನ್ನಡ ಲೇಖಕರಿರುವುದು ವಿಶೇಷ. ಕನ್ನಡದ ಅತ್ಯುತ್ತಮ ಸಾಹಿತ್ಯವು ಓದುಗರೆದೆಯಲ್ಲಿ ಮಾನವೀಯತೆ, ಸಮಾನತೆ, ಸ್ವಾತಂತ್ರ್ಯಗಳಂತಹ ಆದರ್ಶ ಮೌಲ್ಯಗಳನ್ನು ತುಂಬುವುದು ಇದಕ್ಕೆ ಕಾರಣ.

## ಕಾಳು ಮತ್ತು ಬೂಸಾ

ಕಾಳ ಮೇಲಿನ ಹೊಟ್ಟು, ಎಂಬರ್ಥವುಳ್ಳ 'ಬೂಸಾ', ಮೂಲತಃ ಉರ್ದು ಶಬ್ದ. ಇದು ಈ ಪ್ರಕರಣದಲ್ಲಿ ನಿರುಪಯುಕ್ತ ಎಂಬರ್ಥದಲ್ಲಿ ಬಳಕೆಯಾಯಿತು. ವಾಸ್ತವದಲ್ಲಿ ಕಾಳು–ಹೊಟ್ಟಿನ ಸಂಬಂಧವು ಜೀವ–ದೇಹದಂತೆ ಅಭೇದ್ಯ. ಹೊಟ್ಟು ಧಾನ್ಯರಕ್ಷಣೆಗೆಂದೇ ಪ್ರಕೃತಿ ಸೃಷ್ಟಿಸಿರುವ ಹೊರಕವಚ. ಅದು ಬೇರ್ಪಟ್ಟಾಗ ಮನುಷ್ಯರ ದೃಷ್ಟಿಯಿಂದ ನಿರುಪಯುಕ್ತವಾದರೂ ಪಶುಗಳ ಪಾಲಿಗೆ ಆಹಾರವೇ. ಆದ್ದರಿಂದ 'ಬೂಸಾ' ಶಬ್ದವನ್ನು ಬರೀ ಕಾಳು ಸಿಗುವುದೆಂಬ ಭ್ರಮೆಯಲ್ಲಿ ಹೊಟ್ಟು ಕುಟ್ಟುವುದು ಎಂದು ಗ್ರಹಿಸುವುದು ಉಚಿತ. ಶರಣರು ವೇದಶಾಸ್ತ್ರ ಪುರಾಣಗಳನ್ನು ನಿರಾಕರಿಸುತ್ತ 'ನುಚ್ಚುತೌಡು ಕಾಣಿಭೋ' ಎಂದಿದ್ದು ಇದೇ ಅರ್ಥದಲ್ಲಿ. ಉತ್ತಮ–ಕಳಪೆಗಳು ಏಕೀಭವಿಸಿರುವ ದರ್ಶನ–ಸಾಹಿತ್ಯಗಳಲ್ಲಿ ಎಚ್ಚರದಿಂದ ಆಯ್ಕೆ ಮಾಡಿಕೊಳ್ಳಬೇಕು ಎಂಬ ತರತಮ ವಿವೇಚನೆಯ ಪರಿಭಾಷೆಯಾಗಿ 'ಬೂಸಾ'ವನ್ನು ಬಿಬಿಯವರು ಬಳಸಿದರು. ಈ ಅರ್ಥವನ್ನು ಒಕ್ಕೂಟದ ಭಾಷಣದಲ್ಲಿ ಕುವೆಂಪು ವಿಸ್ತರಿಸಿದರು:

'ಬೂಸಾ ಸಾಹಿತ್ಯ ಅಂತ ಯಾವುದನ್ನು ಕರೆಯುತ್ತೇವೆಯೋ, ಅದು ಪ್ರಪಂಚದ ಎಲ್ಲಾ ಸಾಹಿತ್ಯದಲ್ಲಿಯೂ ಇರುತ್ತದೆ; ಸುಮಾರು ಮುಕ್ಕಾಲು ಪಾಲಿನ ಮೇಲೆ ಇರುವುದು ಬೂಸಾ ಸಾಹಿತ್ಯವೇ. ಯಾವುದನ್ನು ನೀವು ಫಸ್ಟ್‌ರೇಟ್ ಗ್ರೇಟ್ ಅಂತ ಹೇಳುತ್ತೀರೋ, ಅದೆಲ್ಲ ಒಂದು ಕಾಲುವಾಸಿ ಇದ್ದರೆ ಅದೇ ನಮ್ಮ ಪುಣ್ಯ ...ಆ ಅರ್ಥದಲ್ಲಿ ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದಲ್ಲೂ ಸಹ ನಾವು ಮೂರು ನಾಲ್ಕು ಜನರನ್ನು ಮಹಾಕವಿಗಳು ದೊಡ್ಡವರು ಅಂತ ಗುರುತಿಸುತ್ತೇವೆ. ಇನ್ನೂ ಏಳೆಂಟು ಜನ ಕವಿಗಳನ್ನು ಸಮರ್ಥರಾದ ಕವಿಗಳು ಅಂತ ಹೇಳುತ್ತೇವೆ. ಉಳಿದವರು ಸಾವಿರಾರು ಇದ್ದಾರೆ. ಅವರೆಲ್ಲ ಬೂಸಾ ಸಾಹಿತ್ಯದವರೇ.' ಕಡೆಗೆ ಸಾಹಿತ್ಯದಲ್ಲಿ ಉತ್ತಮವಾದುದನ್ನು ಗುರುತಿಸುವ, ಬೇರ್ಪಡಿಸುವ ಮತ್ತು ಪಡೆದುಕೊಳ್ಳುವ ಕುಶಲತೆಯನ್ನು, ತಮ್ಮ ಮುಂದಿದ್ದ ಯುವಲೇಖಕರಿಗೆ ಕುವೆಂಪು, ಕುಮಾರವ್ಯಾಸನ ನಿದರ್ಶನದ ಮೂಲಕ ವಿವರಿಸಿದರು.

ಬಿಬಿಯವರ ಹೇಳಿಕೆಯಲ್ಲಿ ಪರಂಪರೆಯನ್ನು ವಿವೇಕದಿಂದ ಅನುಸಂಧಾನಿಸುವ ತಾಳ್ಮೆ ಇಲ್ಲದಿರುವುದು ಕುವೆಂಪು ಅವರಿಗೆ ಗೊತ್ತಿತ್ತು. ಆ ಹೊತ್ತಿನ ತೇಜಸ್ವಿ, ಚಂಪಾ, ಲಂಕೇಶ, ಆಲನಹಳ್ಳಿಯವರ ಹಾಗೆ ಬಿಬಿಯವರು ಕೂಡ ದುಡುಕುಳ್ಳ ಯುವಕರಾಗಿದ್ದರು. ಎಂತಲೇ ಪರಂಪರೆಯನ್ನು ಇಡಿಯಾಗಿ ನಿರಾಕರಿಸುವ ದ್ರಾವಿಡ ಮುನ್ನೇತ್ರ ಕಳಗದವರ ಪ್ರವೃತ್ತಿಯನ್ನು ದೋಷಪೂರ್ಣ ಎಂದು ಕುವೆಂಪು ವಿವರಿಸುತ್ತಾರೆ; ತೊಡಲಾಗದ ಹಿರಿಯರ ಕಾಲದ ಚಿನ್ನದ ಒಡವೆಯನ್ನು ಎಸೆವ ಬದಲು, ಕರಗಿಸಿ ಬೇಕಾದ ಒಡವೆ ಮಾಡಿಸಿಕೊಳ್ಳುವ ರೂಪಕದ ಮೂಲಕ ಪರ್ಯಾಯವನ್ನು ಸೂಚಿಸುತ್ತಾರೆ. ಸ್ವತಃ ಲೇಖಕರಾಗಿ ಮತ್ತು ಸಾಧಕರಾಗಿ ಅವರು ಇದೇ ವಿಧಾನದಲ್ಲಿ ಭಾರತೀಯ ಸಂಪ್ರದಾಯ–ಪರಂಪರೆಗಳ ಸೃಜನಶೀಲ ಅನುಸಂಧಾನ ಮಾಡಿದವರು. ಅವರು ಮನುಧರ್ಮಶಾಸ್ತ್ರ ಮತ್ತು ಉಪನಿಷತ್ತುಗಳ ನಡುವೆ ಎರಡನೆಯದನ್ನು ಆರಿಸಿಕೊಂಡರು; ರಾಮಾಯಣದ ಕತೆಯನ್ನು ಪಡೆದು 'ದರ್ಶನಂ' ರಚಿಸುವಾಗ, ಶಂಬೂಕ ಪ್ರಸಂಗವನ್ನು (ಅವರ ಪ್ರಕಾರ 'ವಿಷದಹಲ್ಲು') ತೆಗೆದು ಹಾಕಿದರು. ಸಮಾಜನಿರ್ಮಾಣ ಮಾಡುವ ಹೊಣೆಗಾರಿಕೆಯುಳ್ಳ ಎಲ್ಲ ಲೇಖಕರೂ–ಸಂತರೂ ಗತದಿಂದ ಆಯ್ಕೆ ಮತ್ತು ನಿರಾಕರಣೆಯ ಈ ದ್ವಂದ್ವಾತ್ಮಕವಾದ